# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ಸ್ವಾತಂತ್ರ್ಯದ
ಅಮೃತ ಮಹೋತ್ಸವ

## ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು

## ದಿನಾಂಕ:02.09.2022

# ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007**

ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008


**: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮ್ಯತಂ :**

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/123/2022–23 ದಿನಾಂಕ:06.09.2022

ಗೆ,

**ಮಾನ್ಯ ಸಿಂಡಿಕೇಟ್ ಸದಸ್ಯರು ಗಳಿಗೆ.**

ಮಾನ್ಯರೆ,

ವಿಷಯ : ದಿನಾಂಕ:02.09.2022 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ–III ರ ಪ್ರಕರಣ 16(i) ರ ರೀತ್ಯ ದಿನಾಂಕ:02.09.2022 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು–01.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್‌ನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ವಿಶ್ವವಿದ್ಯಾನಿಲಯದ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ನಿರ್ದೇಶಕರು, ಸಿ.ಡಿ.ಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಐಕ್ಯೂಏಸಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಹೆದ್ದಾರಿ–13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ.
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ
15. ಉಪಕುಲಸಚಿವರು/ಸಹಾಯಕ ಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಸಿ.ಡಿ.ಸಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ.
16. ಆಪ್ತ ಕಾರ್ಯಾಲಯ, ಕುಲಪತಿಗಳು/ಕುಲಸಚಿವರು ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
17. ಹೆಚ್ಚುವರಿ ಪ್ರತಿ

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:02.09.2022ರಂದು ಮಧ್ಯಾಹ್ನ 3.30ಕ್ಕೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು

<u>ಸಭೆಯಲ್ಲಿ ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು. | : ಅಧ್ಯಕ್ಷರು |
| 2. | ಡಾ. ರಾಜಶೇಖರ್ ಹೆಬ್ಬಾರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ. | : ಸದಸ್ಯರು |
| 3. | ಶ್ರೀ ಎಂ.ವಿ.ಮಲ್ಲಿಕಾರ್ಜುನ ಮಾಡಾಳ್, ಚನ್ನಗಿರಿ. | : ಸದಸ್ಯರು |
| 4. | ಶ್ರೀಮತಿ ಗೀತಾ ಜಿ., ಮೈಸೂರು. | : ಸದಸ್ಯರು |
| 5. | ಡಾ: ಶ್ರೀಧರ್ ಎಸ್. ಶಿವಮೊಗ್ಗ | : ಸದಸ್ಯರು |
| 6. | ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ್, ದಾವಣಗೆರೆ. | : ಸದಸ್ಯರು |
| 7. | ಶ್ರೀ ಪವನ್ ಜಿ.ಎಂ., ಹಿರೇಗುಂಟನೂರು, ಚಿತ್ರದುರ್ಗ ಜಿಲ್ಲೆ. | : ಸದಸ್ಯರು |
| 8. | ಶ್ರೀ ಆಶಿಷರೆಡ್ಡಿ ಎಂ. ಬೆಂಗಳೂರು. | : ಸದಸ್ಯರು |
| 9. | ಡಾ. ಜಿ.ಪಿ. ರಾಮನಾಥ್, ಹಾಸನ. | : ಸದಸ್ಯರು |
| 10. | ಶ್ರೀ ಇನಾಯತ್‌ವುಲ್ಲಾ ಟಿ. ಹರಿಹರ. | : ಸದಸ್ಯರು |
| 11. | ಡಾ. ಆರ್. ಮಹೇಶ್, ಪ್ರಾಂಶುಪಾಲರು. | : ಸದಸ್ಯರು |
| 12. | ಡಾ. ಧರಣೇಂದ್ರಯ್ಯ ಡಿ. ಪ್ರಾಂಶುಪಾಲರು. | : ಸದಸ್ಯರು |
| 13. | ಶ್ರೀಮತಿ ಕವಿತಾ ಜಿ.ಎಂ., ಪ್ರಾಂಶುಪಾಲರು. | : ಸದಸ್ಯರು |
| 14. | ಪ್ರೊ. ಲಕ್ಷ್ಮಣ್ ಪಿ., ಪ್ರಾಧ್ಯಾಪಕರು ಹಾಗೂ ಡೀನರು. | : ಸದಸ್ಯರು |
| 15. | ಪ್ರೊ. ರಂಗಪ್ಪ ಕೆ., ಪ್ರಾಧ್ಯಾಪಕರು | : ಸದಸ್ಯರು |
| 16. | ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). | : ಸದಸ್ಯರು |
| 17. | ಶ್ರೀಮತಿ ಸರೋಜ ಬಿ.ಬಿ., ಕುಲಸಚಿವರು. | : ಸದಸ್ಯ ಕಾರ್ಯದರ್ಶಿ |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 17 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು                ಕುಲಪತಿಗಳು

ಮಾ.ಸ.ನಿ ವಿಭಾಗ

**ಸಂ.01**(a) ವಿಷಯಃ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಸಂಬಂಧ ಮಾದರಿ ಪರಿನಿಯಮಗಳ ಅನುಮೋದನೆ ಬಗ್ಗೆ.

ಪ್ರಸ್ತಾವನೆ:

ಯುಜಿಸಿ ಸಂಸ್ಥೆಯು ವಿಶ್ವವಿದ್ಯಾನಿಲಯದ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ಯುಜಿಸಿ ವೇತನ ಶ್ರೇಣಿಗಳಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಬೋಧಕರಿಗೆ ಹಾಗೂ ಬೋಧಕೇತರ ಅಧಿಕಾರಿಗಳಿಗೆ ದಿನಾಂಕ:01.01.2016 ರಿಂದ ಅನ್ವಯವಾಗುವಂತೆ 7ನೇ ಯುಜಿಸಿ ಪರಿಷ್ಕೃತ ಶ್ರೇಣಿಗಳನ್ನು ಯುಜಿಸಿ ಪತ್ರ ಸಂಖ್ಯೆ:F.No.23-4/2017(PS), Dated:31.01.2018 ಜಾರಿಗೊಳಿಸಿರುತ್ತದೆ.

2. ಅಲ್ಲದೆ, ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ನಿಯಮಗಳನ್ನು ರಚಿಸಿರುತ್ತದೆ. ತತ್ಸಂಬಂಧ ಎಲ್ಲಾ ರಾಜ್ಯಗಳ ವಿಶ್ವವಿದ್ಯಾನಿಲಯಗಳಲ್ಲಿ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ ಹಾಗೂ ವೃತ್ತಿ ಪದೋನ್ನತಿ ನಿಯಮಗಳನುಸಾರ ಅರ್ಹ ಬೋಧಕರಿಗೆ ವೃತ್ತಿ ಪದೋನ್ನತಿ ನೀಡುವ ಸಂಬಂಧ – ಯುಜಿಸಿ ಪತ್ರ ಸಂಖ್ಯೆ:F.1-2/2017(ECPS), Dated:18.07.2018 ರನ್ವಯ ಎಲ್ಲಾ ರಾಜ್ಯಗಳ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಮಾರ್ಗಸೂಚಿಗಳನ್ನು ಪರಿಚಲಿಸಿರುತ್ತದೆ.

3. ಯುಜಿಸಿ ಸಂಸ್ಥೆಯು ದಿನಾಂಕ:01.01.2016 ರಿಂದ ಜಾರಿಗೊಳಿಸಿರುವ 7ನೇ ಪರಿಷ್ಕೃತ ವೇತನ ಶ್ರೇಣಿಗಳು ಹಾಗೂ ರಾಜ್ಯ ಸರ್ಕಾರದ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಷ್ಕೃತ ವೇತನ ಶ್ರೇಣಿಗಳನ್ನು ಜಾರಿಗೊಳಿಸುವ ದಿಸೆಯಲ್ಲಿ ಹಾಗೂ ವಿವಿಧ ಸ್ತರದ ಬೋಧಕ ಹುದ್ದೆಗಳಿಗೆ ನೇಮಕ ಮಾಡುವಾಗ ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ಪಾಲಿಸುವ ಸಂಬಂಧ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: No ED 483 UNE 2017, Dated:16.03.2019 ಸವಿವರ ಮಾರ್ಗಸೂಚಿಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಪರಿಚಲಿಸಿರುತ್ತದೆ ಹಾಗೂ ಸದರಿ ಮಾರ್ಗಸೂಚಿಗಳನ್ನು ಪರಿನಿಯಮಗಳಾಗಿ ಪರಿವರ್ತಿಸಿ ಸರ್ಕಾರದ ಮೂಲಕ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪಡೆಯಲು ತಿಳಿಸಿರುತ್ತದೆ.

4. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಪರಿಚಲಿಸಿರುವ ಮಾರ್ಗಸೂಚಿಗಳನ್ನು ವಿಶ್ವವಿದ್ಯಾನಿಲಯವು ಕರಡು ಪರಿನಿಯಮಗಳಾಗಿ ಪರಿವರ್ತಿಸಿ ಸರ್ಕಾರದ ಮೂಲಕ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ದಾವಿವಿ: ಪ್ರಾಧಿಕಾರ: 2019–20/9142, ದಿನಾಂಕ:07.01.2020 ರಂದು ಸಲ್ಲಿಸಲಾಗಿತ್ತು.

5. ಯುಜಿಸಿ ನಿಯಮಗಳನುಸಾರ ದಿನಾಂಕ:01.01.2016 ರಂದು ಜಾರಿಗೆ ಬಂದಿರುವ 7ನೇ ಪರಿಷ್ಕೃತ ವೇತನ ಶ್ರೇಣಿಯ ಮಾರ್ಗಸೂಚಿಗಳಿಗೆ ದಿನಾಂಕ:06.06.2020 ರಂದು ಘನತೆವೆತ್ತ ಕುಲಾಧಿಪತಿಗಳು ಅನುಮೋದನೆ ನೀಡಿದ್ದು, ತತ್ಸಂಬಂಧದ ಮಾಹಿತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ತಮ್ಮ ಪತ್ರ ಸಂಖ್ಯೆ: ಇಡಿ 148 ಯುಎನ್ಇ 2019, ದಿನಾಂಕ:24.06.2020 ರಂದು ವಿಶ್ವವಿದ್ಯಾನಿಲಯಕ್ಕೆ ತಿಳಿಸಿರುತ್ತಾರೆ.

6. ವಿಶ್ವವಿದ್ಯಾನಿಲಯದ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ ಹುದ್ದೆಗಳನ್ನು ನೇಮಕ ಮಾಡುವ ಸಂಬಂಧ ಯುಜಿಸಿ ಪತ್ರ ಸಂಖ್ಯೆ:F.1-2/2017(EC/PS), Dated:18.07.2018 ರ ಮೂಲಕ ಪರಿಚಲಿಸಲಾಗಿರುವ ಮಾರ್ಗಸೂಚಿಗಳನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ.

ಕುಲಸಚಿವರು ಕುಲಪತಿಗಳು

ಅಲ್ಲದೆ, ರಾಜ್ಯ ಸರ್ಕಾರದ ವಿಶ್ವವಿದ್ಯಾನಿಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರ ನೇಮಕಾತಿ ಸಂಬಂಧ ಕಟ್ಟುನಿಟ್ಟಾಗಿ ಅನುಸರಿಸಬೇಕಾದ ಏಕರೂಪದ ಕರಡು ಮಾದರಿ ಪರಿನಿಯಮಗಳನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯಗಳ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಿರುತ್ತದೆ.

7. ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ಸಿದ್ಧಪಡಿಸಿರುವ ಮಾದರಿ ಕರಡು ಪರಿನಿಯಮಗಳನ್ವಯ ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳು ಕರಡು ಪರಿನಿಯಮಗಳನ್ನು ರಚಿಸಿ, ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 309 ಯುಎನ್ಇ 2021, ದಿನಾಂಕ:26.07.2022ರಲ್ಲಿ ತಿಳಿಸಲಾಗಿದೆ.

8. ವಿಶ್ವವಿದ್ಯಾನಿಲಯದಲ್ಲಿ ಬೋಧಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂದರ್ಭಗಳಲ್ಲಿ ಹಾಗೂ ವೃತ್ತಿ ಪದೋನ್ನತಿ ನೀಡುವ ಸಂದರ್ಭಗಳಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು (Parameeters) ಸದರಿ ಕರಡು ಪರಿನಿಯಮಗಳ ಪುಟ ಸಂಖ್ಯೆ 46 ರಿಂದ 66 ರವರೆಗಿನ ಪುಟಗಳಲ್ಲಿ ತಿಳಿಸಲಾಗಿದೆ.

9. ಸದರಿ ಯುಜಿಸಿ ನಿಯಮಗಳನ್ನು ಅವಲೋಕಿಸಿ, ಮಾದರಿ ಪರಿನಿಯಮಗಳನ್ನು ಸಿದ್ಧಪಡಿಸಿ ಹಾಗೂ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿಸಿ, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಮಾನ್ಯ ಉಪಾಧ್ಯಕ್ಷರಾದ ಪ್ರೊ. ಬಿ. ತಿಮ್ಮೇಗೌಡ., ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸಿರುವ ಪತ್ರದ ಪ್ರತಿಯನ್ನು ಸಹ ಮಾನ್ಯ ಸದಸ್ಯರ ಅವಗಾಹನೆಗಾಗಿ ಈ ಟಿಪ್ಪಣಿಗೆ ಲಗತ್ತಿಸಿದೆ.

ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು/ಮಾರ್ಗಸೂಚಿಗಳನ್ನು ಸದರಿ ಕರಡು ಪರಿನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದ್ದು, ಸದರಿ ಕರಡು ನಿಯಮಗಳನ್ನು ದಿನಾಂಕ:03.09.2022ರಂದು ಅಪರಾಹ್ನ 03.30 ಕ್ಕೆ ಏರ್ಪಡಿಸಲಾಗಿರುವ ವಿದ್ಯಾ ವಿಷಯಕ ಪರಿಷತ್ತಿನ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಮತ್ತು ಅನುಮೋದನೆಗೆ ಮಂಡಿಸಲಾಗಿದೆ.

**<u>ನಿರ್ಣಯ</u>**

ಸಿಂಡಿಕೇಟ್ ಸಭೆಯು DRAFT STATUTES GOVERNING THE APPOINTMENT AND PROMOTION OF TEACHING AND OTHER ACADEMIC STAFF AND MEASURES FOR THE MAINTENANCE OF ACADEMIC STANDARDS IN HIGHER EDUCATION IN DAVANGERE UNIVERSITY AND IN ITS CONSTITUENT COLLEGES AS PER THE UGC REGULATIONS -2018 ರ ಮಾದರಿ ಪರಿನಿಯಮಗಳಿಗೆ ಸಭೆಯು ಒಮ್ಮತದಿಂದ ಪರಿಶೀಲಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ ವಿಭಾಗ

**ಸಂ.01(b) ವಿಷಯಃ ಡಾ. ವೆಂಕಟರಾವ್ ಎಂ ಪಾಲಾಟೆ, ಪ್ರಾಧ್ಯಾಪಕರು – ಇವರ ಪ್ರಾಧ್ಯಾಪಕ ಹುದ್ದೆಯ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವ ಬಗ್ಗೆ.**

**ಉಲ್ಲೇಖಃ** 1. ವಿ.ವಿ. ಅಧಿಕೃತ ಜ್ಞಾಪನ ಪತ್ರ ಸಂಖ್ಯೆಃ ದಾವಿವಿ/ಹೆಚ್.ಆರ್.ಎಂ.ವೃಪ/ಇತಿಹಾಸ/6838, ದಿನಾಂಕಃ 19.03.2022

2. ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಿವಿ ಇವರ ಪತ್ರ ಸಂಖ್ಯೆಃDU/His/66/2021-22, ದಿನಾಂಕಃ 04.08.2022

ಪ್ರಸ್ತಾವನೆ:

1. ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ಡಾ. ವೆಂಕಟರಾವ್ ಎಂ ಪಾಲಾಟೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ – ಇವರಿಗೆ ಪದೋನ್ನತಿ ನಿಯಮಗಳನುಸಾರ ಪ್ರಾಧ್ಯಾಪಕ ಹುದ್ದೆಗೆ ದಿನಾಂಕಃ27.09.2021ರಿಂದ ಅನ್ವಯವಾಗುವಂತೆ ಅರ್ಹತಾ ದಿನಾಂಕವೆಂದು ಪರಿಗಣಿಸಿ ವೃತ್ತಿ ಪದೋನ್ನತಿ ನೀಡಲಾಗಿತ್ತು.
2. ಯು.ಜಿ.ಸಿ. – 2018ರ ವೃತ್ತಿ ಪದೋನ್ನತಿ ನಿಯಮಾವಳಿಗಳನುಸಾರ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ಹೊಂದಲು ಸದರಿ ಪ್ರಾಧ್ಯಾಪಕರ ಮಾರ್ಗದರ್ಶನದಡಿ ಒಬ್ಬ ಸಂಶೋಧನಾರ್ಥಿಯು ಪಿ.ಹೆಚ್.ಡಿ. ಪದವಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.
3. ಡಾ. ವೆಂಕಟರಾವ್ ಎಂ ಪಾಲಾಟೆ – ಇವರು ದಿನಾಂಕಃ04.08.2022ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಸಲ್ಲಿಸಿ ಅವರ ಮಾರ್ಗದರ್ಶನದಲ್ಲಿ ಶ್ರೀ ನಾಗರಾಜು, ಇತಿಹಾಸ ಅಧ್ಯಯನ ವಿಭಾಗ – ಇವರಿಗೆ ಡಾಕ್ಟರೇಟ್ ಪದವಿ ಪ್ರದಾನಿಸಲಾಗಿದೆಯೆಂದು ತಿಳಿಸಿರುತ್ತಾರೆ. ಅದಕ್ಕೆ ಪೂರಕವಾಗಿ ಪರೀಕ್ಷಾಂಗ ವಿಭಾಗದ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿರುತ್ತಾರೆ.

ತತ್ಸಂಬಂಧ, ಡಾ. ವೆಂಕಟರಾವ್ ಎಂ ಪಾಲಾಟೆ, ಪ್ರಾಧ್ಯಾಪಕರು – ಇವರಿಗೆ ಯು.ಜಿ.ಸಿ. ವೃತ್ತಿ ಪದೋನ್ನತಿ–2018ರ ನಿಯಮಗಳನುಸಾರ ಅರ್ಹತಾ ದಿನಾಂಕವು 27.09.2021ರ ಬದಲಿಗೆ ದಿನಾಂಕ:18.03.2022ಕ್ಕೆ ವೃತ್ತಿ ಪದೋನ್ನತಿ ನೀಡಲಾಗಿದೆ.

ದಿನಾಂಕ:01.08.2022ರಂದು ಸದರಿಯವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ ಪದವಿ ಪ್ರಧಾನ ಮಾಡಲಾಗಿರುತ್ತದೆ. ಸದರಿ ದಿನಾಂಕದಿಂದ ಆರ್ಥಿಕ ಸೌಲಭ್ಯಗಳನ್ನು ನಿಗದಿ ಮಾಡುವ ಬಗ್ಗೆ ಮಾನ್ಯ ಕುಲಪತಿಗಳು ಒಪ್ಪಿದ ಕ್ರಮವನ್ನು ಸ್ಥಿರೀಕರಿಸುವ (ratification) ಕುರಿತು ದಿನಾಂಕಃ02.09.2022ರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

## ನಿರ್ಣಯ

**ಡಾ. ವೆಂಕಟರಾವ್ ಎಂ ಪಾಲಾಟೆ, ಪ್ರಾಧ್ಯಾಪಕರು** – ಇವರಿಗೆ ಯು.ಜಿ.ಸಿ. ವೃತ್ತಿ ಪದೋನ್ನತಿ–2018ರ ನಿಯಮಗಳನುಸಾರ ದಿನಾಂಕ:27.09.2021 ರಿಂದ ಪ್ರಾಧ್ಯಾಪಕರ ಹುದ್ದೆಗೆ ವೃತ್ತಿ ಪದೋನ್ನತಿ ನೀಡಲಾಗಿದೆ. ಆದರೆ, ದಿನಾಂಕ:18.03.2022ರಂದು ಸದರಿಯವರ ಮಾರ್ಗದರ್ಶನದಡಿಯಲ್ಲಿ ಸಂಶೋಧನಾರ್ಥಿಯು ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದ, ದಿನಾಂಕ:18.03.2022ರಿಂದ ಅನ್ವಯವಾಗುವಂತೆ ವೃತ್ತಿ ಪದೋನ್ನತಿ ನೀಡಲಾಗಿದೆ.

ಮುಂದುವರೆದು, ದಿನಾಂಕ:01.08.2022ರಂದು ಸದರಿಯವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ ಪದವಿ ಪ್ರಧಾನ ಮಾಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿಯವರಿಗೆ ದಿನಾಂಕಃ01.08.2022 ರಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯಗಳನ್ನು ನಿಗದಿ ಮಾಡಲು ಮಾನ್ಯ ಕುಲಪತಿಗಳು ತೆಗೆದುಕೊಂಡ ನಿರ್ಣಯವನ್ನು ಸಭೆಯು ಸುಧೀರ್ಘ ಚರ್ಚೆಯ ನಂತರ ಒಪ್ಪಿ (ratification) ಸ್ಥಿರೀಕರಿಸಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ ವಿಭಾಗ

**ವಿ.ಸಂ.01(C)** **ವಿಷಯಃ ಕೋರ್ಸ್ ಕೋ ಆರ್ಡಿನೇಟರ್ ನೇಮಕ ಮಾಡುವಂತೆ ಕೋರಿರುವ ಬಗ್ಗೆ.**

**ಉಲ್ಲೇಖಃ** 01. ವಿ.ವಿ. ಅಧಿಕೃತ ಜ್ಞಾಪನ ಪತ್ರ ಸಂಖ್ಯೆಃ ದಾವಿವಿ/ಮಾಸನಿ/ 331/2018-19, ದಿನಾಂಕಃ 17.10.2019

02. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗ ಇವರ ಪತ್ರ ಸಂಖ್ಯೆಃ ದಾವಿವಿ/ಸ್ನಾಕೇಚಿ/38 /2022-23, ದಿನಾಂಕಃ 08.06.2022.

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ಶ್ರೀ ಸುಂದರಂ ಎಂ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ - ಇವರನ್ನು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ದಿನಾಂಕ:17.10.2019ರಿಂದ ತಾತ್ಕಾಲಿಕವಾಗಿ ಅಥವಾ ಮುಂದಿನ ಆದೇಶದವರೆಗೆ ಕೋರ್ಸ್ ಕೋ-ಆರ್ಡಿನೇಟರ್‌ಗಳನ್ನಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿತ್ತು.

ಮುಂದುವರೆದು ಉಲ್ಲೇಖ (2)ರಲ್ಲಿ ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ - ಇವರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಬೋಧಕ ವರ್ಗದವರ ಜೇಷ್ಠತಾ ಪಟ್ಟಿಯನ್ವಯ ಶ್ರೀ ಗಿರೀಶ್ ಡಿ.ಹೆಚ್, ಸಹಾಯಕ ಪ್ರಾಧ್ಯಾಪಕರು - ಇವರು ಸೇವಾ ಹಿರಿತನವನ್ನು ಹೊಂದಿರುವುದರಿಂದ ಸದರಿಯವರನ್ನು ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ಕೋರ್ಸ್ ಕೋ-ಆರ್ಡಿನೇಟರ್‌ನ್ನಾಗಿ ನೇಮಕ ಮಾಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕಃ 02.09.2022 ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ**

ಶ್ರೀ ಗಿರೀಶ್ ಡಿ.ಹೆಚ್, ಸಹಾಯಕ ಪ್ರಾಧ್ಯಾಪಕರು - ಇವರನ್ನು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಕೋರ್ಸ್ ಕೋ-ಆರ್ಡಿನೇಟರನ್ನಾಗಿ 02 ವರ್ಷಗಳ ಅವಧಿಗೆ ಅಥವಾ ಮುಂದಿನ ಅದೇಶದ ವರೆಗೆ ನೇಮಕ ಮಾಡಲು ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ ವಿಭಾಗ

<u>ವಿ.ಸಂ.01(d)</u> ವಿಷಯಃ **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.**

**ಉಲ್ಲೇಖಃ**
1. ವಿ.ವಿ. ಅಧಿಸೂಚನೆ ಸಂಖ್ಯೆಃ ದಾವಿವಿ/ಮಾಸನಿ/331/2021–22/5341, ದಿನಾಂಕಃ 18.01.2022
2. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಹೆಚ್.ಆರ್.ಎಂ.ವೃಪ/ರಾಜ್ಯಶಾಸ್ತ್ರ/6849, ದಿನಾಂಕಃ 19.03.2022
3. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/331/2022–23/ 1893, ದಿನಾಂಕಃ 24.08.2022

**ಪ್ರಸಾವನೆಃ**

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಡಾ. ಅಶೋಕ್‌ಕುಮಾರ್ ವಿ. ಪಾಳೇದ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ದಿನಾಂಕಃ18.11.2021 ರಿಂದ 17.11.2023ರವರೆಗೆ ಅಥವಾ ಮುಂದಿನ ಆದೇಶದವರೆಗೆ ಸಂಯೋಜನಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿತ್ತು.

ಉಲ್ಲೇಖ (2)ರಲ್ಲಿ ಡಾ. ಅಶೋಕ್‌ಕುಮಾರ್ ವಿ. ಪಾಳೇದ, ಇವರನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಿ ಉಲ್ಲೇಖ (3)ರಲ್ಲಿ ಸದರಿಯವರನ್ನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಮುಂದುವರೆದು ಡಾ. ಅಶೋಕ್‌ಕುಮಾರ್ ವಿ. ಪಾಳೇದ್ ಇವರು ಹೆಚ್ಚುವರಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ತಮ್ಮನ್ನು ಅಪರಾದಶಾಸ್ತ್ರ ಅಧ್ಯಯನ ವಿಭಾಗದಿಂದ ಬಿಡುಗಡೆಗೊಳಿಸುವಂತೆ ಮೌಖಿಕವಾಗಿ ಕೋರಿರುತ್ತಾರೆ. ಈ ಕುರಿತು ಸ್ನಾತಕೋತ್ತರ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ದಿನಾಂಕಃ02.09.2022ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

<u>ನಿರ್ಣಯ</u>

ಡಾ. ನಾಗರಾಜು ಎನ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಅಪರಾಧಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಗಳನ್ನಾಗಿ 02 ವರ್ಷಗಳ ಅವಧಿಗೆ ಅಥವಾ ಮುಂದಿನ ಅದೇಶದ ವರೆಗೆ ನೇಮಕ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

ಮಾ.ಸ.ನಿ ವಿಭಾಗ

ವಿ.ಸಂ.01(ಲ) ವಿಷಯಃ **ಯು.ಜಿ.ಸಿ/ಸಿ.ಎ.ಎಸ್ ಯೋಜನೆಯಡಿ ವೃತ್ತಿ ಪದೋನ್ನತಿ ಅರ್ಜಿಗಳನ್ನು ಅಹ್ವಾನಿಸುವ ಕುರಿತು.**

ಉಲ್ಲೇಖಃ ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಯಾದ ಯು.ಜಿ.ಸಿ 7ನೇ ಪರಿಷ್ಕೃತ ವೇತನ ಶ್ರೇಣಿಯ ಪರಿನಿಯಮಗಳ ದಿನಾಂಕಃ 24.06.2020

**ಪ್ರಸಾವನೆಃ**

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕರು ಮತ್ತು ಯುಜಿಸಿ ಶ್ರೇಣಿಯಡಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಧಿಕಾರಿಗಳಿಗೆ **UGC-CAS** ನಿಯಮಗಳಡಿ ಹಾಗೂ ಅರ್ಹತೆಗನುಗುಣವಾಗಿ **(UGC Regulations on Minimum Qualification for Appointment of Teachers and others and Academic Staff – and measures for maintenance of Standards in Higher Education 2018)** ವೃತ್ತಿ ಪದೋನ್ನತಿಗೆ ಅರ್ಜಿಗಳನ್ನು ಆಹ್ವಾನಿಸಬೇಕಾಗಿರುತ್ತದೆ.

UGC-CAS - 2018ರ ನಿಯಮಗಳನುಸಾರ ವೃತ್ತಿ ಪದೋನ್ನತಿಗೆ ಅರ್ಹತೆ ಇರುವ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಹಾಗೂ ಯುಜಿಸಿ ವೇತನ ಶ್ರೇಣಿಗಳಡಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಧಿಕಾರಿಗಳು – ದಾಖಲೆಗಳ ಪ್ರತಿಗಳೊಂದಿಗೆ ಒಟ್ಟು 10 ಸೆಟ್ಟುಗಳಲ್ಲಿ ಅರ್ಜಿ ಶುಲ್ಕ ರೂ.5,000/– ಗಳೊಂದಿಗೆ ಸಲ್ಲಿಸಲು ತಿಳಿಸಬೇಕಾಗಿದ್ದು, ಈ ಸಂಬಂಧ ದಿನಾಂಕ:02.09.2022ರ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕರು ಮತ್ತು ಯುಜಿಸಿ ಶ್ರೇಣಿಯಡಿ ಕಾರ್ಯನಿರ್ವಹಿಸುತ್ತಿರುವ ಇತರೆ ಅಧಿಕಾರಿಗಳಿಗೆ UGC-CAS 2018 ರ ನಿಯಮಗಳಡಿ ಹಾಗೂ ಅರ್ಹತೆಗನುಗುಣವಾಗಿ ವೃತ್ತಿ ಪದೋನ್ನತಿಗೆ ಅರ್ಜಿಗಳನ್ನು ಆಹ್ವಾನಿಸಲು ಸಭೆಯು ಸುಧೀರ್ಘ ಚರ್ಚೆಯ ನಂತರ ಒಪ್ಪಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಶೈಕ್ಷಣಿಕ ವಿಭಾಗ

<u>ವಿ.ಸಂ.02(a)</u> **ವಿಷಯಃ** ಇತಿಹಾಸ ಅಧ್ಯಯನ ವಿಭಾಗದ ಹೆಸರನ್ನು ಬದಲಾಯಿಸುವ ಕುರಿತು.

**ಪ್ರಸ್ತಾವನೆ:**

ದಾವಣಗೆರೆ ವಿಶ್ವವಿದ್ಯಾನಿಲಯವು ದಿನಾಂಕ:18.08.2009ರಿಂದ ಸ್ಥಾಪನೆಗೊಂಡಿದ್ದು, ಅಂದಿನಿಂದಲೂ ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಒಂದು ವಿಭಾಗವಾದ ಸ್ನಾತಕೋತ್ತರ 'ಇತಿಹಾಸ ಅಧ್ಯಯನ ವಿಭಾಗ' ಎಂಬ ಹೆಸರಿನಿಂದಲೇ ಸ್ನಾತಕೋತ್ತರ ಅಧ್ಯಯನ ವಿಭಾಗ ಹಾಗೂ ವಿಭಾಗದ ಸಂಶೋಧನಾ ಕಾರ್ಯಗಳು ಜರುಗುತ್ತಾ ಬಂದಿವೆ.

ಪ್ರಸ್ತುತ ವಿಭಾಗದ ಮುಖ್ಯಸ್ಥರಾದ ಪ್ರೊ. ವೆಂಕಟರಾವ್ ಎಂ. ಪಲಾಟೆ, ಪ್ರಾಧ್ಯಾಪಕರು ಹಾಗೂ ಡೀನರು ಕಲಾ ನಿಕಾಯ – ಇವರು ಇತಿಹಾಸ ಅಧ್ಯಯನ ವಿಭಾಗ ಅಧ್ಯಯನ ಮಂಡಳಿಯಲ್ಲಿ ದಿನಾಂಕ:25.07.2022ರಂದು ಜರುಗಿದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ನಡಾವಳಿಗಳನ್ನು ಸಲ್ಲಿಸಿ ಮುಂದಿನ ಆಡಳಿತಾತ್ಮಕ ಕಾರ್ಯದಲ್ಲಿ ಮತ್ತು ಪಿ.ಹೆಚ್.ಡಿ ನೋಂದಣಿ ಪ್ರಮಾಣ ಪತ್ರಗಳು ಮತ್ತು ಕೋರ್ಸ್‌ವರ್ಕ್ ಅಂಕಪಟ್ಟಿಗಳಲ್ಲಿ 2021-22ನೇ ಶೈಕ್ಷಣಿಕ ಸಾಲಿನಿಂದ ಸದರಿ ಅಧ್ಯಯನ ವಿಭಾಗದ ಹೆಸರನ್ನು **"ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ"**– (Department of Studies in History & Archaeology) ಎಂದು ಮುಂದುವರೆಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

ಸದರಿ ಮನವಿಯನ್ನು ಪರಿಶೀಲಿಸಲಾಗಿದ್ದು, ಈ ಕುರಿತು ಮಾನ್ಯ ಕುಲಪತಿಗಳು ಮೌಖಿಕವಾಗಿ ಸೂಚಿಸಿರುವಂತೆ ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಒಂದು ವಿಭಾಗವಾದ ಸ್ನಾತಕೋತ್ತರ 'ಇತಿಹಾಸ ಅಧ್ಯಯನ ವಿಭಾಗ' ವನ್ನು 2021-22ನೇ ಶೈಕ್ಷಣಿಕ ಸಾಲಿನಿಂದ **"ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ"**– (Department of Studies in History & Archaeology) ಎಂಬ ಹೆಸರಿನಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗ ಹಾಗೂ ವಿಭಾಗದ ಸಂಶೋಧನಾ ಕಾರ್ಯಗಳಲ್ಲಿ ಅಧ್ಯಯನ ವಿಭಾಗದ ಹೆಸರನ್ನು ಬದಲಾಯಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

ಶೈಕ್ಷಣಿಕ ವಿಭಾಗ

**ವಿ.ಸಂ.02(b) ವಿಷಯಃ** ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ (Research And Development Cell) ಕೋಶ ಸ್ಥಾಪಿಸುವ ಕುರಿತು ಹಾಗೂ ಇದರ ಕಾರ್ಯವೈಖರಿ ನೋಡಿಕೊಳ್ಳಲು ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ.

**ಪ್ರಸ್ತಾವನೆ:**

ಯು.ಜಿ.ಸಿ ಸಂಸ್ಥೆಯವರು ತಿಳಿಸಿರುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಮತ್ತು ವಾಣಿಜ್ಯ ಮತ್ತು ನಿರ್ವಹಣೆಯು ಹೊಸದಾಗಿ ಹೊರಹೊಮ್ಮುತ್ತಿರುವ ಮತ್ತು ಸವಾಲಿನ ಗಡಿ ಪ್ರದೇಶಗಳಲ್ಲಿ ಸಂಶೋಧನೆಯನ್ನು ಉತ್ತೇಜಿಸುವ ಮೂಲಕ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಸಂಸ್ಕೃತಿಯನ್ನು ಬೆಳೆಸುವುದು ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ಗುರಿಗಳಲ್ಲಿ ಒಂದಾಗಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ಉದ್ದೇಶವು NEP-2020 ರಲ್ಲಿ ಕಡ್ಡಾಯಗೊಳಿಸಲಾದ ಬಹುಶಿಸ್ತೀಯ / ಟ್ರಾನ್ಸ್‌ಡಿಸಿಪ್ಲಿನರಿ ಮತ್ತು ಭಾಷಾಂತರ ಸಂಶೋಧನಾ ಸಂಸ್ಕೃತಿ ಸೇರಿದಂತೆ ಪ್ರಮುಖ ಉದಯೋನ್ಮುಖ ಗಡಿ ಪ್ರದೇಶಗಳಲ್ಲಿ ಸಂಶೋಧನೆ ನಡೆಸಲು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದಕ್ಕೆ ಸಂಶೋಧನೆ ಮತ್ತು ಅಭಿವೃದ್ಧಿ (Research And Development Cell) ಕೋಶವನ್ನು ವಿಶ್ವವಿದ್ಯಾನಿಲಯದಲ್ಲಿ ಆರಂಭಿಸಬೇಕಾಗಿದೆ.

ಸಂಶೋಧನಾ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಮತ್ತು ಬಲಪಡಿಸಲು ದೃಢವಾದ ಕಾರ್ಯವಿಧಾನವನ್ನು ಹಾಕಲು, NEP – 2020 ರ ನಿಯಮಗಳನುಸಾರ ಮಾಡಬೇಕಾಗಿದೆ. ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಯಮ, ಸರ್ಕಾರ, ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಏಜೆನ್ಸಿಗಳಾದ್ಯಂತ ಸಹಯೋಗವನ್ನು ಉತ್ತೇಜಿಸಬೇಕಾಗಿದೆ. ಆದ್ದರಿಂದ, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಸಂಶೋಧನೆಗೆ ಹೆಚ್ಚಿನ ಪ್ರವೇಶವನ್ನು ಸುಲಭಗೊಳಿಸಲು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ (Research And Development Cell) ಕೋಶವನ್ನು ಸ್ಥಾಪಿಸಲು ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ನಿರ್ಣಯ

ಯು.ಜಿ.ಸಿ ಸಂಸ್ಥೆಯವರು ತಿಳಿಸಿರುವಂತೆ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ (Research And Development Cell) ಕೋಶವನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು. ಮುಂದುವರೆದು, ಸಂಶೋಧನೆ ಮತ್ತು ಅಭಿವೃದ್ಧಿ ಕೋಶಕ್ಕೆ ಡಾ. ಶಿಶುಪಾಲ ಎಸ್., ಪ್ರಾಧ್ಯಾಪಕರು, ಸೂಕ್ಷ್ಮಜೀವಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ನಿರ್ದೇಶಕರನ್ನಾಗಿ ನೇಮಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಖರೀದಿ ವಿಭಾಗ

<u>ವಿ.ಸಂ.03(a)</u> ವಿಷಯಃ ಕುಲಸಚಿವರು ಆಡಳಿತ ಭವನದಲ್ಲಿ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಗಣಕಯಂತ್ರಗಳು, ಪ್ರಿಂಟರ್‌ಗಳು, ಸ್ಕ್ಯಾನರ್ ಮತ್ತು ಜೆರಾಕ್ಸ್ ಯಂತ್ರಗಳನ್ನು ಖರೀದಿಸುವ ಖರೀದಿಸುವ ಬಗ್ಗೆ.

<u>ಪ್ರಸ್ತಾವನೆ:</u>

ಕುಲಸಚಿವರು ಆಡಳಿತ ಭವನದಲ್ಲಿ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಪೀಠೋಪಕರಣ ಹಾಗೂ ಯಂತ್ರೋಪಕರಣಗಳನ್ನು ಕೊರತೆ ಇರುವುದರಿಂದ ಈ ಕೆಳಕಂಡಂತೆ ವಿವಿಧ ವಿಭಾಗವಾರು ತುರ್ತಾಗಿ ಗಣಕಯಂತ್ರಗಳು, ಪ್ರಿಂಟರ್‌ಗಳು, ಸ್ಕ್ಯಾನರ್ ಮತ್ತು ಜೆರಾಕ್ಸ್ ಯಂತ್ರಗಳನ್ನು ಖರೀದಿಸಬೇಕಾಗಿರುತ್ತದೆ. ಆದ್ದರಿಂದ, ಖರೀದಿ ಮತ್ತು ದಾಸ್ತಾನು ವಿಭಾಗದಿಂದ ಖರೀದಿಸಲು ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ಪಿಠೋಪಕರಣ/ಯಂತ್ರೋಪಕರಣಗಳ ವಿವರ ತಖ್ತೆ:</u>

| ಕ್ರ.ಸಂ. | ವಿವರ | ಕುಲಸಚಿವರ ಕಾರ್ಯಾಲಯ | ಪ್ರಾಧಿಕಾರಗಳು | ಮಾ.ಸ.ನಿ | ಬಿ.ಓ.ಎಸ್ | ಶೈಕ್ಷಣಿಕ | ಒಟ್ಟು ಪ್ರಮಾಣ |
|---|---|---|---|---|---|---|---|
| 1. | ಗಣಕ ಯಂತ್ರಗಳು | - | - | - | 01 | 01 | **02** |
| 2. | ಗಣಕ ಯಂತ್ರಗಳ ಟೇಬಲ್‌ಗಳು | - | 02 | 03 | 02 | 01 | **08** |
| 3. | ಗಣಕ ಯಂತ್ರಗಳ ಕುರ್ಚಿಗಳು | - | 02 | - | - | - | **02** |
| 4. | ಗಣಕ ಯಂತ್ರಗಳ ಕಲರ್‌ಪ್ರಿಂಟರ್/ಸ್ಕ್ಯಾನರ್ | 01 | 01 | 01 | 01 | - | **04** |
| 5. | Hard Disc 2 TB | - | 01 | - | - | - | **01** |
| 6. | ಜೆರಾಕ್ಸ್ ಯಂತ್ರ ದೊಡ್ಡದು | - | 01 | 01 | - | 01 | **03** |
| 7. | ಆಫೀಸ್ ಟೇಬಲ್ | - | - | 03 | 01 | - | **04** |

<u>ನಿರ್ಣಯ</u>

ಕುಲಸಚಿವರ ಆಡಳಿತ ಭವನದ ವಿವಿಧ ವಿಭಾಗಗಳಲ್ಲಿ ಅವಶ್ಯವಿರುವ ಮೇಲ್ಕಂಡ ತಖ್ತೆಯ ಕ್ರ.ಸಂ 1 ರಿಂದ 7ರಲ್ಲಿ ನಮೂದಿಸಿರುವ ಎಲ್ಲಾ ಪೀಠೋಪಕರಣ ಹಾಗೂ ಯಂತ್ರೋಪಕರಣಗಳನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆ ನೋಡಿಕೊಂಡು ಟೆಂಡರ್ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಖರೀದಿ ವಿಭಾಗ

**ವಿ.ಸಂ.03(b)** ವಿಷಯಃ ವಿವಿಧ ಅಧ್ಯಯನ ವಿಭಾಗದ ಅಧ್ಯಕ್ಷರುಗಳು ಕೋರಿರುವಂತೆ ಗಣಕಯಂತ್ರಗಳು, ಪ್ರಿಂಟರ್‌ಗಳು, ಸ್ಕ್ಯಾನರ್ ಮತ್ತು ಜೆರಾಕ್ಸ್ ಯಂತ್ರಗಳನ್ನು ಖರೀದಿಸುವ ಬಗ್ಗೆ.

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಹಾಗೂ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗದಲ್ಲಿ ಅವಶ್ಯವಿರುವ ಗಣಕಯಂತ್ರಗಳು, ಪ್ರಿಂಟರ್ಸ್ ಹಾಗೂ ಜೆರಾಕ್ಸ್‌ಯಂತ್ರಗಳು ಕೊರತೆ ಇರುವುದರಿಂದ ವಿವಿಧ ವಿಭಾಗವಾರು ಗಣಕಯಂತ್ರಗಳು, ಪ್ರಿಂಟರ್ಸ್ ಹಾಗೂ ಜೆರಾಕ್ಸ್‌ಯಂತ್ರಗಳ ಗಳನ್ನು ಖರೀದಿಸಬೇಕಾಗಿರುತ್ತದೆ ವಿಭಾಗವಾರು ಸಿದ್ದಪಡಿಸಿರುವ ವಿವರದ ಪಟ್ಟಿ ಲಗತ್ತಿಸಲಾಗಿದೆ ತತ್ಸಂಬಂಧ, ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ಪಿಠೋಪಕರಣ/ಯಂತ್ರೋಪಕರಣಗಳ ವಿವರ ತಖ್ತೆ:

| Departments Name | Printer, Scanner, Xerox (HP Laser Jet 1536 Dnf Mfp) | Computer | Departments Name | Printer, Scanner, Xerox (HP Laser Jet 1536 Dnf Mfp) | Computer |
|---|---|---|---|---|---|
| Kannada | 1 | 1 | Turavanur College | 1 | 1 |
| Biochemistry | 1 | 10 | BaBu Jagajeevana Rao Research Centre | 1 | 1 |
| Biotech | 1 | - | Sarvajna Peeta | | |
| History | 1 | - | Journalism | 1 | 10 |
| Zoology | 1 | - | Social Work | 1 | 2 |
| Economics | 1 | - | Sociology | 1 | 1 |
| English | 1 | 1 | Botany | 1 | 1 |
| Micro Biology | 1 | 2 | Mathematics | 1 | 1 |
| Chemistry | 1 | 1 | B.Ped/M.Ped | 1 | 1 |
| Education | 1 | 1 | Mathematics | 1 | 1 |
| Food Technology | 1 | - | Physics | 1 | 1 |
| Finance Section | 2 | - | MBA | 1 | 1 |
| Commerce Dept | 1 | 2 | NSS U-1&2 | 1 | 1 |
| Computer Science | 1 | 1 | | | |
| PG Centre | 3 | 5 | **TOTAL** | **30** | **46** |

ನಿರ್ಣಯ

ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗದ ಅಧ್ಯಕ್ಷರುಗಳು ಕೋರಿರುವಂತೆ ಅವಶ್ಯವಿರುವ ಮೇಲ್ಕಂಡ ತಖ್ತೆಯಲ್ಲಿ ನಮೂದಿಸಿರುವ ಎಲ್ಲಾ ಪೀಠೋಪಕರಣ ಹಾಗೂ ಯಂತ್ರೋಪಕರಣಗಳನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆ ನೋಡಿಕೊಂಡು ಟೆಂಡರ್ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

ಪರೀಕ್ಷಾಂಗ ವಿಭಾಗ

<u>ವಿ.ಸಂ.04(a)</u> ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ "ದ್ವಿಗುಣ ಅವಧಿ" ಪೂರೈಸಿರುವ ಸಮ ಮತ್ತು ಬೆಸ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ವಿಶೇಷ ಅನುಮತಿ ನೀಡುವ ಬಗ್ಗೆ.

<u>ಪ್ರಸ್ತಾವನೆ:</u>

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜು/ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ 2009-10 ರಿಂದ 2012-13ರವರೆಗೆ ವ್ಯಾಸಂಗ ಮಾಡಿ "ದ್ವಿಗುಣ ಅವಧಿ" ಪೂರೈಸಿದ ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಮನವಿ ಮಾಡಿಕೊಂಡಿರುತ್ತಾರೆ. ಸದರಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶೇಷ ಶುಲ್ಕ ರೂ.10,000/- ವಿಧಿಸಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮುಂಬರುವ ದಿನಗಳಲ್ಲಿ ಪರೀಕ್ಷೆ ನಡೆಸಲು ವಿಶೇಷ ಅನುಮತಿಗಾಗಿ ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜು/ವಿಭಾಗಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ 2009-10 ರಿಂದ 2012-13ರವರೆಗೆ ವ್ಯಾಸಂಗ ಮಾಡಿ "ದ್ವಿಗುಣ ಅವಧಿ" ಪೂರೈಸಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮುಂಬರುವ ದಿನಗಳಲ್ಲಿ ಪರೀಕ್ಷೆ ನಡೆಸಲು ಒಂದು ಸೆಮಿಸ್ಟರ್‌ಗೆ ವಿಶೇಷ ಶುಲ್ಕ ರೂ.10,000/- ವಿಧಿಸಿ ಪರೀಕ್ಷೆಗೆ ಅವಕಾಶ ಕಲ್ಪಿಸಲು ಒಮ್ಮತದಿಂದ ಸಭೆಯು ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಹಣಕಾಸು ವಿಭಾಗ

**ವಿ.ಸಂ.05(a) ವಿಷಯಃ** ವಿಶ್ವವಿದ್ಯಾನಿಲಯದ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಡೀಕರಣ ಬಗ್ಗೆ.

ಪ್ರಸ್ತಾವನೆ:

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣದ ಶೈಕ್ಷಣಿಕ ಗುಣಮಟ್ಟಗಳು, ಬೋಧನಾ ಕ್ರಮಗಳ ಕುರಿತು ಹಾಗೂ ಬೋಧಕ ಹುದ್ದೆಗಳ ನೇರ ನೇಮಕಾತಿ ಮತ್ತು ವೃತ್ತಿ ಪದೋನ್ನತಿ ನೀಡುವ ಸಂಬಂಧವಾಗಿ, ಯು.ಜಿ.ಸಿ ಮತ್ತು ಎ.ಐ.ಸಿ.ಟಿ.ಈ ನಿಯಮಗಳು ಮತ್ತು ಮಾರ್ಗಸೂಚಿಗಳನ್ವಯ ಹಾಗೂ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಪತ್ರ ಇಡಿ:309/ಯುಎನ್ಐ 2021, ದಿನಾಂಕ:26.07.2022ರನ್ವಯ ಪರಿಚಲಿಸಲಾದ ಮಾದರಿ ನೇಮಕಾತಿ/ವೃತ್ತಿ ಪದೋನ್ನತಿ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಲು ವಿವಿಧ ಪ್ರಾಧಿಕಾರಗಳು ಹಾಗೂ ಹಣಕಾಸು ಸಭೆಯಲ್ಲಿ ಅನುಮೋದನೆ ನಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:02.09.2022ರಂದು ಪೂರ್ವಾಹ್ನ 11.30ಕ್ಕೆ Google Meet ಮೂಲಕ ಆನ್‌ಲೈನ್/ಆಫ್‌ಲೈನ್ ನಲ್ಲಿ ಏರ್ಪಡಿಸಲಾಗಿದ್ದ ಜರುಗಿದ ವಿಶ್ವವಿದ್ಯಾನಿಲಯದ ವಿಶೇಷ ಹಣಕಾಸು ಸಮಿತಿ ಸಭೆಯಲ್ಲಿ STATUTES GOVERNING THE APPOINTMENT AND PROMOTION OF TEACHING AND OTHER ACADEMIC STAFF AND MEASURES FOR THE MAINTENANCE OF ACADEMIC STANDARDS IN HIGHER EDUCATION IN DAVANGERE UNIVERSITY AND IN ITS CONSTITUENT COLLEGES AS PER THE UGC REGULATIONS -2018 ರ ಕರಡು ಪರಿನಿಯಮಗಳಿಗೆ ಅನುಮೋದನೆ ನೀಡಿ ನಡಾವಳಿಗಳನ್ನು ದೃಡೀಕರಣಕ್ಕಾಗಿ ದಿನಾಂಕ:02.09.2022ರ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:02.09.2022ರಂದು ಜರುಗಿದ ವಿಶ್ವವಿದ್ಯಾನಿಲಯದ ವಿಶೇಷ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿತು.

ಕುಲಸಚಿವರು

ಕುಲಪತಿಗಳು